# ಪ್ರಥಮ ದರ್ಜೆ ನ್ಯಾಯಿಕ ದಂಡಾಧೀಕಾರಿಗಳ ನ್ಯಾಯಾಲಯ ಸವಣೂರ

## ಸಿ.ಸಿ. ಸಂಖ್ಯೆ : 1337/2024

ಪಿರ್ಯಾದಿದಾರರು : ಗಂಗಾದರಯ್ಯ ತಂದೆ ವೀರಭದ್ರಯ್ಯ ಹಿರೇಮಠ
ವಯಾಃ 50 ವರ್ಷ, ಉದ್ಯೋಗ; ವ್ಯಾಪಾರ ವ ಶೇತ್ಕಿ
ವಾಸಃ ಯಲವಿಗಿ ಗ್ರಾಮ,
ತಾಃ ಸವಣೂರ, ಜಿಃ ಹಾವೇರಿ .

## ವಿರುದ್ಧ

ಆರೋಪಿತರು : ಆನಂದ ತಂದೆ ರಾಮಣ್ಣ ಮೇಳಿ
ವಯಸ್ಸು :40 ವರ್ಷ, ಉದ್ಯೋಗಃ ವ್ಯಾಪಾರ
ವಾಸಃ ಯಲವಿಗಿ ಗ್ರಾಮ,
ತಾಃ ಸವಣೂರ, ಜಿಃ ಹಾವೇರಿ .

## ಆಪಾದನೆ

ಮೇಲ್ಕಾಣಿಸಿದ ಆರೋಪಿತರಾದ ನೀವು ದಿನಾಂಕಃ 01-06-2024 ರಂದು ನಿಮ್ಮ ಹೋಟೆಲ್ ವ್ಯವಹಾರದ ಸಲುವಾಗಿ ಹಣಕಾಸಿನ ಅಡಚಣೆ ಇದ್ದುರಿಂದ, 2 ತಿಂಗಳ ಮಟ್ಟಿಗೆ ಅಂತಾ ಪಿರ್ಯಾದಿದಾರರ ಹತ್ತಿರ ಕೈಗಡ ಸಾಲ ರೂ.2,00,000/- ಹಣವನ್ನು ಪಡೆದುಕೊಂಡು, 20-07.2024 ರಂದು ಆರೋಪಿತರಾದ ನೀವು ಸದರಿ ಹಣವನ್ನು ಹಿಂದಿರುಗಿಸುವ ಸಲುವಾಗಿ ನೀವು ನಿಮ್ಮ ಖಾತೆಯುಳ್ಳ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಯಲವಿಗಿ ಶಾಖೆಯ ಚೆಕ್ ನಂ.019312 ಚೆಕ್ಕನ್ನು ದಿನಾಂಕ 20-07-2024 ರಂದು ಅಥವಾ ತದನಂತರದ ದಿನಾಂಕದಂದು ಚೆಕ್ಕನ್ನು ಹಾಜರಪಡಿಸಿ ಸದರಿ ಚೆಕ್ಕಿನಲ್ಲಿ ರೂ.2,00,000/- ಗಳನ್ನು ಪಡೆದುಕೊಳ್ಳಲು ಪಿರ್ಯಾದಿದಾರರಿಗೆ ಕೊಟ್ಟಿರುತ್ತೀರಿ. ನೀವು ನೀಡಿದ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಖಾತೆ ಹೊಂದಿದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಯಲವಿಗಿ ಶಾಖೆ ಇವರಲ್ಲಿ ನಗಧೀಕರಣಕ್ಕಾಗಿ ಸಲ್ಲಿಸಿದಾಗ, “Funds Insufficient” ಅಂತಾ ಹೇಳಿ ಸದರಿ ಬ್ಯಾಂಕಿನವರು ಪಿರ್ಯಾದಿವರಿಗೆ ದಿನಾಂಕ 24-07-2024 ರಂದು ಹಿಂಬರಹವನ್ನು ನೀಡಿರುತ್ತಾರೆ. ದಿನಾಂಕ 30-07-2024 ರಂದು ಪಿರ್ಯಾದಿಯವರು ತಮ್ಮ ವಕೀಲರ ಮುಖಾಂತರ ನೋಟೀಸನ್ನು ನಿಮ್ಮ ವಿಳಾಸಕ್ಕೆ ಕಳುಹಿಸಿದಾಗ, ದಿನಾಂಕ 03-08-2024 ರಂದು (party refused) ಅಂತ ಪರತ್ ಮರಳಿ ಬಂದಿರುತ್ತದೆ. ಆರೋಪಿತರಾದ ನೀವು ಈವರೆಗೂ ಚೆಕ್ ಹಣ ರೂ.2,00,000/- ಗಳನ್ನು ಪಿರ್ಯಾದಿದಾರರಿಗೆ ಕೊಟ್ಟಿರುವುದಿಲ್ಲ. ಆರೋಪಿತರಾದ

ನೀವು ಪಿರ್ಯಾದಿದಾರರಿಗೆ ಕೊಡಬೇಕಾದ ಚೆಕ್ ಹಣ ರೂ.2,00,000/- ಗಳನ್ನು ಕೊಡದೇ ಮೋಸ ಹಾಗೂ ವಂಚನೆ ಮಾಡುವ ಉದ್ದೇಶದಿಂದ, ನಿಮ್ಮ ಖಾತೆಯಲ್ಲಿ ಹಣ ಇಲ್ಲದ್ದು ನಿಮಗೆ ಗೊತ್ತಿದ್ದರೂ ಸಹ ಖೊಟ್ಟಿ ಚೆಕ್ ನ್ನು ಪಿರ್ಯಾದಿದಾರರಿಗೆ ಕೊಟ್ಟಿದ್ದು, ಆ ಮೂಲಕ ಕಲಂ.138 ವರ್ಗಾವಣೆ ಲಿಖಿತಗಳ ಅಧಿನಿಯಮದಡಿಯಲ್ಲಿ ಆರೋಪಿತರಾದ ನೀವು ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

(ಶ್ರೀನಿವಾಸ. ಎಸ್.ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು ಸವಣೂರ.

<u>ಆರೋಪಿ ಉತ್ತರ</u>

ಪ್ರಶ್ನೆ 1 : ಈಗ ನಿಮಗೆ ಓದಿ ಹೇಳಿದ ಆಪಾದನೆಯ ಸಾರಾಂಶ ತಿಳಿಯಿತೇ ?
ಉತ್ತರ :

ಪ್ರಶ್ನೆ 2 : ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೋ ?
ಉತ್ತರ :

(ಈ ಮೇಲಿನ ಆಪಾದನೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣಿಕರಿಸುತ್ತೇನೆ)

ದಿನಾಂಕ : 04-03-2025

ಸಿ.ನ್ಯಾ. ಮತ್ತು
ಪ್ರ.ದ.ನ್ಯಾ.ದಂ.ಗಳು, ಸವಣೂರ.

ಆರೋಪಿತನ ಸಹಿ: